ದಿನಾಂಕಃ 09–04–2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿ 3 ಮತ್ತು 4 ಪರ ವಕೀಲರಿಂದ,

1) ನಿಶಾನೆ.ಪಿ–23 ದಾಖಲೆಯ ಪ್ರಕಾರ 17 ಗುಂಟೆಯ ವಿಸ್ತೀರ್ಣ ಕೈಗಾರಿಕೆಯ ಉದ್ದೇಶಕ್ಕಾಗಿ ಭೂಪರಿವರ್ತನೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಶಾನೆ ಪಿ–4 ದಾಖಲೆಯ ಪ್ರಕಾರ ಕೈಗಾರಿಕೆಯ ಮತ್ತು ವಾಸದ ಮನೆಯ ಉದ್ದೇಶಕ್ಕಾಗಿ ಭೂಪರಿವರ್ತನೆ ಆಗಿರುತ್ತದೆ ಎಂದರೆ ಸಾಕ್ಷಿಯು ಮೋಸದಿಂದ ಆಗಿರುತ್ತದೆ ಎಂದು ನುಡಿಯುತ್ತಾರೆ. ನಂಜುಡಶೆಟ್ಟಿ ರವರ ಹೆಸರಿನಲ್ಲಿ 20 ಗುಂಟೆ ವಿಸ್ತೀರ್ಣಕ್ಕೆ ಕ್ರಯ ಪತ್ರ ಆಗಿರುತ್ತದೆ ಎಂದರೆ ಮೋಸದಿಂದ ಆಗಿರುತ್ತದೆ ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿ ಸದರಿ 20 ಗುಂಟೆ ವಿಸ್ತೀರ್ಣದಲ್ಲಿ ಕಾರ್ಖಾನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈಗಲೂ ಸಹ ಸದರಿ ವಿಸ್ತೀರ್ಣದಲ್ಲಿ ಕಾರ್ಖಾನೆ ಕಟ್ಟಡ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ಅಳತೆ ಮಾಡಿಸಲು ನನ್ನ ತಕರಾರು ಇರುವುದಿಲ್ಲ.

2) ದಿನಾಂಕ 02.03.1976 ರಂದು ದೂಳಿ ಸತ್ಯನಾರಾಯಣ ರವರಿಗೆ ಮಾಡಿಕೊಟ್ಟಿರುವ ಕ್ರಯ ಪತ್ರಕ್ಕೆ ನನ್ನ ಸಹೋದರರಾದ ನಜೀರ್ ಅಹಮದ್, ವಾಹೀದ್ ಅಹಮದ್ ಮತ್ತು ಖಲೀಲ್ ಅಹಮದ್ ಸಹಿ ಮಾಡಿರುತ್ತಾರೆ. ನಾನು ಸಹ ಸದರಿ ಕ್ರಯ ಪತ್ರಕ್ಕೆ ಸಹಿ ಮಾಡಿರುತ್ತೇನೆ. 6 ನೇ ವಾದಿ ಅಲ್ಪ ವಯಸ್ಕ ಆಗಿರುವ ಕಾರಣ ಸಹಿ ಮಾಡಿರುವುದಿಲ್ಲ. ದಿನಾಂಕ 30.09.2003 ರಿಂದ ಈ ದಾವೆ ಸಲ್ಲಿಸುವ ಕಾಲಕ್ಕೆ ದೂಳಿ ಸತ್ಯನಾರಾಯಣಶೆಟ್ಟಿ ರವರ ಹೆಸರಿನಲ್ಲಿರುವ ಕ್ರಯ ಪತ್ರವನ್ನು ಪ್ರಶ್ನಿಸಿ ಎಲ್ಲಿಯೂ ಸಹ ದಾವೆ ಸಲ್ಲಿಸಿರುವುದಿಲ್ಲ. ಪ್ರತಿವಾದಿಗಳು ಗಲಾಟೆ ಮಾಡಿರುವ ಕಾರಣ ನಾವು ಕ್ರಯ ಪತ್ರವನ್ನು ಪಶ್ನಿಸಿರುವುದಿಲ್ಲ. ಪ್ರತಿವಾದಿಗಳು ಗಲಾಟೆ ಮಾಡಿರುವ ಬಗ್ಗೆ ಅವರ ವಿರುದ್ಧ ದೂರು ದಾಖಲು ಮಾಡಿರುತ್ತೇನೆ. ನನ್ನ ತಂದೆ ತೀರಿಕೊಂಡ 10 ವರ್ಷಗಳ ನಂತರ

ಪ್ರತಿವಾದಿಗಳು ಗಲಾಟೆ ಮಾಡಿರುತ್ತಾರೆ. ಪೋಲಿಸ್ ದೂರು ನೀಡಿದ ಬಗ್ಗೆ ನನ್ನ ಬಳಿ ದಾಖಲೆ ಇರುವುದಿಲ್ಲ.

3) 1976 ರಲ್ಲಿ ಆಗಿರುವ ಕ್ರಯ ಪತ್ರದಲ್ಲಿ ಮೂರು ಎಕರೆ ಆರು ಗುಂಟೆ ವಿಸ್ತೀರ್ಣ ನಮೂದು ಆಗಿರುತ್ತದೆ ಎಂದರೆ ದೂಳಿ ಸತ್ಯನಾರಾಯಣ ಶೆಟ್ಟಿ ರವರು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ನಾವು ಬರೆದುಕೊಟ್ಟಿರುವ ಕ್ರಯ ಪತ್ರದಲ್ಲಿ ನಮೂದು ಆಗಿರುವ ಆಸ್ತಿಯ ಚೆಕ್ಕು ಬಂದಿ ದಕ್ಷಿಣಕ್ಕೆ ರಸ್ತೆ ಎಂದು ನಮೂದು ಆಗಿರುತ್ತದೆ ಎಂದರೆ ಸರಿ. ಸರ್ವೇ ನಂ. 46/1 ಆಸ್ತಿಯ ದಕ್ಷಿಣಕ್ಕೆ ರಸ್ತೆ ಇರುತ್ತದೆ ಎಂದರೆ ಸರಿ. ಸರ್ವೇ ನಂ. 46/1 ರಲ್ಲಿ 3 ನೇ ಪ್ರತಿವಾದಿ 20 ಗುಂಟೆ ಆಸ್ತಿಯನ್ನು ಖರೀದಿ ಮಾಡಿದ್ದು, ಖರೀದಿ ಮಾಡಿದ ದಿನದಿಂದ 3 ನೇ ಪ್ರತಿವಾದಿ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ನಾವು ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೆ. ಕಾರ್ಖಾನೆ ಇರುವ ಜಾಗಕ್ಕೆ ಬ್ಯಾಡರಹಳ್ಳಿ ಗ್ರಾಮ ಪಂಚಾಯತಿ ರವರು ಖಾತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೇ ನಂ. 46/1 ರಲ್ಲಿ ಇರುವ 3 ಎಕರೆ 6 ಗುಂಟೆಯಲ್ಲಿ ನಾವು ಸ್ವಾಧೀನ ಇರುತ್ತೇವೆ ಎಂದು ತೋರಿಸಲು ನಮೂನೆ-16 ದಾಖಲೆ ಇರುತ್ತದೆ. ಸದರಿ ದಾಖಲೆಯ ಉಪನೋಂದಣಾಧಿಕಾರಿ ಕಚೇರಿಯಲ್ಲಿ ಪಡೆದುಕೊಂಡಿರುತ್ತೇನೆ.

4) ನನ್ನ ತಂದೆ ತೀರಿಕೊಂಡ ನಂತರ ನಾವು ಪಹಣಿಯಲ್ಲಿ ನಮ್ಮ ಹೆಸರನ್ನು ಬದಲಾವಣೆ ಮಾಡಿಕೊಂಡಿರುವುದಿಲ್ಲ. ನಾನು ಮತ್ತು ನಮ್ಮ ಕುಟುಂಬ ಸದಸ್ಯರು ಸರ್ವೇ ನಂ. 46/1 ರಲ್ಲಿರುವ 3 ಎಕರೆ 6 ಗುಂಟೆ ಆಸ್ತಿಯನ್ನು ದೂಳಿ ಸತ್ಯನಾರಾಯಣ ಶೆಟ್ಟಿ ರವರಿಗೆ ಮಾರಟ ಚ ಮಾಡಿರುವ ವಿಷಯ ಗೊತ್ತಿದ್ದರೂ ಸಹ ನಾನು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು ಮತ್ತು ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 3 ಮತ್ತು 4 ರವರು 20 ಗುಂಟೆ ಆಸ್ತಿಯಲ್ಲಿ ಕಾರ್ಖಾನೆ ನಿರ್ಮಿಸಿ ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ.

ಸರ್ವೇ ನಂ. 46/1 ಒಟ್ಟು ವಿಸ್ತೀರ್ಣವನ್ನು ನಾನು ಯಾವತ್ತು ಅಳತೆ ಮಾಡಿಸಿರುವುದಿಲ್ಲ. ಸರ್ವೇ ನಂ. 46/1 ರಲ್ಲಿ 3 ಎಕರೆ 6 ಗುಂಟೆ ವಿಸ್ತೀರ್ಣವನ್ನು ಅಳತೆ ಮಾಡಿಸಿರುತ್ತೇನೆ. ಆದರೆ ದಾಖಲೆ ಇರುವುದಿಲ್ಲ. ಸರ್ವೇ ನಂ. 46/1 ಆಸ್ತಿಯ ದಕ್ಷಿಣಕ್ಕೆ ರಸ್ತೆ ಬರುವುದಿಲ್ಲ ಎಂದರೆ ಸಾಕ್ಷಿ ಅಳತೆ ಮಾಡಿಸಿ ನೋಡಬೇಕಾಗುತ್ತದೆ ಎಂದು ನುಡಿಯುತ್ತಾರೆ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ